ಮಿನಿ ವಿಧಾನಸೌಧ ಕಟ್ಟಡದ ನಿರ್ವಹಣೆ

82(653); ಶ್ರೀ ನಾರಾಯಣಗೌಡ (ಕೆ.ಆರ್.ಪೇಟೆ)

ಅ) ಕೆ.ಆರ್.ಪೇಟೆ ತಾಲ್ಲೂಕು ಮಿನಿ ವಿಧಾನಸೌಧ ಕಟ್ಟಡವು ಸರಿಯಾದ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸದರಿ ಮಿನಿ ವಿಧಾನಸೌಧ ಕಟ್ಟಡದ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ಮಿನಿ ವಿಧಾನಸೌಧವು ದಿನಾಂಕ: 16-06-2007 ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಕಟ್ಟಡವು ಸುಸ್ಥಿತಿಯಲ್ಲಿದೆ. ಕಟ್ಟಡದ ಬಣ್ಣ ನಶಿಸಿ ಹೋಗಿದ್ದು, ಬಣ್ಣ ಬಳಿಯುವ ಹಾಗೂ ಸದರಿ ಕಟ್ಟಡದ ಸುತ್ತಲೂ ಕಾಂಪೌಂಡ್ ನಿರ್ಮಿಸುವ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆಗೆ ತಹಸೀಲ್ದಾರ್, ಕೆ.ಆರ್.ಪೇಟೆ ತಾಲ್ಲೂಕು ಇವರಿಂದ ಪತ್ರ ಬರೆಯಲಾಗಿದೆ.

ಆ) ಕಂದಾಯ ಇಲಾಖೆಯಲ್ಲಿನ ಮಿನಿ ವಿಧಾನಸೌಧ ಕಟ್ಟಡಗಳ ನಿರ್ವಹಣೆ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯ ಮುಖಾಂತರ ನಿರ್ವಹಿಸಲಾಗುತ್ತದೆ. ಈ ಬಗ್ಗೆ ಕಂದಾಯ ಇಲಾಖೆಯಿಂದ ಪ್ರಾದೇಶಿಕ ಆಯುಕ್ತರುಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಕೆ.ಆರ್.ಪೇಟೆ ಯಲ್ಲಿನ ಮಿನಿ ವಿಧಾನಸೌಧ ಕಟ್ಟಡದ ನಿರ್ವಹಣೆಯ ಬಗ್ಗೆ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗಿದ್ದು ಬಣ್ಣ ಬಳಿಯುವ ಹಾಗೂ ಕಾಂಪೌಂಡ್ ನಿರ್ಮಾಣ ಕಾರ್ಯವನ್ನು

ಶೀಘ್ರವಾಗಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.

ಶ್ರೀ ನಾರಾಯಣಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತಾವು ಮಿನಿ ವಿಧಾನಸೌಧ ಎಂದು ಒಂದು ಹೆಸರನ್ನು ಕೊಟ್ಟಿದ್ದೀರಿ. ಆದರೆ ಅದು ಮಿನಿ ವಿಧಾನಸೌಧವಾಗಿ ಉಳಿದಿಲ್ಲ. ಅದರಲ್ಲಿ ಜೇನು, ಜೇಡ ಮತ್ತು leakage ಇದೆ. ಯಾವುದೇ building ನಲ್ಲಿ basement ಗೆ ಹೋದರೆ, 4–5 ಅಡಿ ನೀರು ನಿಂತಿರುತ್ತದೆ. ಅದಕ್ಕಾಗಿ ಸರ್ಕಾರ ಇಲ್ಲಿಯವರೆಗೂ ಏನು ಗಮನಿಸಿದೆ? ತಹಶೀಲ್ದಾರರು report ಕೊಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ದುರಂತ ಏನೆಂದರೆ, 15–15 ದಿವಸಕ್ಕೆ ತಹಶೀಲ್ದಾರರು change ಆಗುತ್ತಿದ್ದಾರೆ. ನಾನು 4–10 ಬಾರಿ ಸಚಿವರನ್ನು ಭೇಟಿ ಮಾಡಿದ್ದೇನೆ.

ಅಧ್ಯಕ್ಷರು:– ಈಗ ಏನಾಗಬೇಕೆಂದು ಕೇಳಿ.

ಶ್ರೀ ನಾರಾಯಣಗೌಡ:– ಮಿನಿ ವಿಧಾನಸೌಧ, ವಿಧಾನಸೌಧದ ರೀತಿ ಕಾಣಬೇಕು. ಅದಕ್ಕಾಗಿ maintenance ಗಾಗಿ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ತಕ್ಷಣ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಸರ್, ಮಿನಿ ವಿಧಾನ ಸೌಧದ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ಈಗಾಗಲೇ ಅದರ ಬಗ್ಗೆ ಡಿ.ಸಿ. ಯವರಿಗೂ ಹೇಳಿದ್ದೇವೆ.

ಅಧ್ಯಕ್ಷರು:– ತಾವು ಹೇಳಿದ್ದೀರಿ. ಆದರೆ ಅವರು ಮಾಡಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಸಂಬಂಧಪಟ್ಟ PWD engineers ರವರಿಗೂ ಕೂಡ ಇದರ ಬಗ್ಗೆ directions ಕೊಟ್ಟಿದ್ದೆವೆ. ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ. Planning ನಲ್ಲಿ ಈಗಾಗಲೇ ಸೇರಿಸಿ ಆಗಿದೆ. ಈಗಾಗಲೇ ಮಾತನಾಡಿದ್ದೇವೆ.

ಶ್ರೀ ಎನ್.ಹೆಚ್. ಕೋನ ರೆಡ್ಡಿ:– ಇಲ್ಲ ಸರ್, ಡಿ.ಸಿ ಯವರು ತಮ್ಮ ಕಛೇರಿಯದ್ದು ಮಾತ್ರ ಮಾಡಿಸಿಕೊಳ್ಳುತ್ತಾರೆ ಹೊರತಾಗಿ ತಹಶೀಲ್ದಾರರ ಕಛೇರಿಗಳನ್ನು ನೋಡುತ್ತಿಲ್ಲ. ನನ್ನ ತಾಲ್ಲೂಕಿನಲ್ಲಿಯೂ ಇದೇ ಪರಿಸ್ಥಿತಿ ಇದೆ. Parking ವ್ಯವಸ್ಥೆ ಇಲ್ಲ. Toilet, bathroom ವ್ಯವಸ್ಥೆ ಇಲ್ಲ. ಆ ರೀತಿ ಮಿನಿ ವಿಧಾನಸೌಧ ಇದೆ. ದಯವಿಟ್ಟು ಅದಕ್ಕೆ ವಿಶೇಷವಾಗಿ ಗಮನಹರಿಸಬೇಕು.

ಶ್ರೀ ಎಸ್.ಎನ್. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ ನನ್ನ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧವನ್ನು ಮಾನ್ಯ ಮುಖ್ಯಮಂತ್ರಿಯವರು ಪ್ರಾರಂಭ ಮಾಡಿ ಎಂಟು ತಿಂಗಳು ಆಯಿತು. ಇನ್ನೂ ಅದರ ಕಾಮಗಾರಿಯು ಪೂರ್ಣಗೊಂಡಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ:– ಮಿನಿ ವಿಧಾನಸೌಧಕ್ಕೆ 20–25 ವರ್ಷದಿಂದ paint ಹೊಡೆದಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೆ, ಎಲ್ಲಾ ಕಡೆ ಈ complaint ಇದೆ. ತಕ್ಷಣ ದುರಸ್ತಿ ಪಡಿಸಲಿಕ್ಕೆ ವ್ಯವಸ್ಥೆ ಮಾಡಲಿಕ್ಕೆ ಸೂಕ್ತ ನಿರ್ದೇಶನ ಕೊಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– PWD ಇಲಾಖೆಯವರು ಅದನ್ನು maintain ಮಾಡಬೇಕು.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ಒಂದು ನಿಮಿಷ. ಮಾನ್ಯ ಸಚಿವರೆ...

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಏಕೆ ಇಷ್ಟೊಂದು.... ಗೊಂದಲ? ನಾನೂ ಇದನ್ನು ಒಪ್ಪಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಇದು ಇಡೀ ರಾಜ್ಯದ್ದು ಸಮಸ್ಯೆ ಇದೆ, ಸರ್. ಒಂದು ನಿಮಿಷ ಕೇಳಿ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಡಿ.ಸಿ. ಯವರ ಹತ್ತಿರ, PWD Executive Engineer ರವರ ಹತ್ತಿರ ಮಾತನಾಡಿದ್ದೇನೆ. ಅವರಿಗೆ ಹಣ ಇಲ್ಲವಂತೆ. ನೀವು revenue ಇಲಾಖೆಯಿಂದ deposit ಮಾಡಿದರೆ ಮಾಡಿಕೊಡುತ್ತಾರಂತೆ.

(ಗೊಂದಲ)

ಅಧ್ಯಕ್ಷರು:– ಇಲ್ಲದೇ ಹೋದರೆ Reserve Bank ಗೆ ಹೋಗಿ ಒಂದಿಷ್ಟು ನೋಟ್‌ಗಳನ್ನು ಹೊಡೆಸಿ ಕೊಡಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ನಾನೇ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಹೇಳಿದ್ದೇನೆ. Planning ನಲ್ಲಿ ಮಾಡಿ ತಕ್ಷಣ PWD ಯವರಿಗೆ ಕೊಡುತ್ತಿದ್ದೇವೆ. ಕೆಲಸವನ್ನು ಮಾಡಿಸಿಕೊಡುತ್ತೇವೆ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ಸರ್ ನಿಮಗೆ interest ಇದೆ. ಇಲ್ಲವೆಂದು ಹೇಳುತ್ತಿಲ್ಲ. Public ನವರಿಗೆ ಅಲ್ಲಿ ಹೊರಗಡೆ ಹೋಗತಕ್ಕಂಥವರಿಗೆ ಒಂದು ಶೌಚಾಲಯವನ್ನು ಅಳವಡಿಸಬೇಕಾಗುತ್ತದೆ. ತಹಶೀಲ್ದಾರರಿಗೆ ಒಂದು ಶೌಚಾಲಯ ಇಲ್ಲ, clean ಮಾಡುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ದಯಮಾಡಿ ....

ಅಧ್ಯಕ್ಷರು:– ಒಂದು ನಿಮಿಷ. ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಹೇಳುವುದರಲ್ಲಿ ಅರ್ಥವಿದೆ. ದಯವಿಟ್ಟು ಹಣವಿಲ್ಲ ಎನ್ನುವ ಶಬ್ದವನ್ನು

ಬಳಸುವುದಕ್ಕೆ ಹೋಗಬೇಡಿ. ದಯವಿಟ್ಟು ಹಣ ಇರಲಿ ಅಥವಾ ಇಲ್ಲದೇ ಇರಲಿ, ತಕ್ಷಣ ದುರಸ್ತಿಪಡಿಸುವ ಕೆಲಸವನ್ನು ತೆಗೆದುಕೊಳ್ಳಿ ಎಂದು ಸುತ್ತೋಲೆ ಹೊರಡಿಸಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದು ಏನೆಂದರೆ, ಹಣ ಇದೇ ಅಥವಾ ಇಲ್ಲವೆನ್ನುವ ಪ್ರಶ್ನೆ ಇಲ್ಲ. ಆ ರೀತಿ ಸಬೂಬು ಬೇಕಾಗಿಲ್ಲ. ತಕ್ಷಣ ಅದಕ್ಕೆ ಹಣ ಬಿಡುಗಡೆ ಮಾಡಿ ಕೆಲಸ ಮಾಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು:– ಆಯಿತು. ಮಾನ್ಯ ಕೋಳಿವಾಡರವರು ಮಾತನಾಡುವುದು.

ಹೊಸದಾಗಿ ಉಪ–ವಿಭಾಗಾಧಿಕಾರಿಗಳ ಕಛೇರಿ ತೆಗೆಯುವುದು

83(173); ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು)

ಅ) ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಹೊಸದಾಗಿ ಉಪವಿಭಾಗಾಧಿಕಾರಿಗಳ ಕಚೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಆ) 2013–14 ನೇ ಸಾಲಿನಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಕೇಂದ್ರ ಸರ್ಕಾರದಿಂದ ದೊರೆತ ಅನುದಾನ ಎಷ್ಟು ಇದರಲ್ಲಿ ಖರ್ಚು ಮಾಡಿದ ಮೊತ್ತವೆಷ್ಟು (ವಿವರ ಒದಗಿಸುವುದು) ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಪ್ರಸ್ತುತ ರಾಣೆಬೆನ್ನೂರು ಶಾಸಕರು ರಾಣೆಬೆನ್ನೂರಿನಲ್ಲಿ ಹೊಸದಾಗಿ ಉಪವಿಭಾಗಾಧಿಕಾರಿಗಳ ಕಚೇರಿಯನ್ನು ಪ್ರಾರಂಭಿಸಲು ದಿನಾಂಕ 11.03.2014 ರಂದು ಮನವಿ ಸಲ್ಲಿಸಿರುತ್ತಾರೆ. ಕಂದಾಯ ಸಚಿವರ ಆಪ್ತ ಶಾಖೆಯಿಂದ ದಿನಾಂಕ 09.05.2014 ರಂದು ಪ್ರಸ್ತಾವನೆಯು